ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 09-12-2021.

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಎಫ್. ಎಂ. ಎಂ.ವಕೀಲರಿಂದ:**

1) 1 ನೇ ವಾದಿಯು ಗುಡ್ಡಪ್ಪ ಕನವಳ್ಳಿ ಇವನೊಂದಿಗೆ ಹೊಂದಿದ ದಾಂಪತ್ಯ ಜೀವನದಿಂದ 2 ರಿಂದ 10 ನೇ ವಾದಿಯರು ಮತ್ತು ಓರ್ವ ಅಕ್ಕಮ್ಮ ಎನ್ನುವ ಮಕ್ಕಳು ಜನಿಸಿರುತ್ತಾರೆ ಎಂದರೆ ಸರಿ. ಸದರಿ ಅಕ್ಕಮ್ಮ ಇವಳು ಗುಡ್ಡಪ್ಪ ಮತ್ತು ದುರ್ಗಮ್ಮ ದಂಪತಿಯ ಹಿರಿಯ ಮಗಳು ಎಂದರೆ ಸರಿ. ಸದರಿ ಅಕಮ್ಮ ಇವಳು 1956 ನೇ ಇಸ್ವಿಯ ಪೂರ್ವದಲ್ಲಿಯೇ ಜನಿಸಿರುತ್ತಾಳೆ ಎಂದರೆ ಸರಿ.

2) ಸದರಿ ಅಕ್ಕಮ್ಮ ಇವಳು 2008 ನೇ ಇಸ್ವಿಯಲ್ಲಿ ಪೋತಿಯಾಗಿರುತ್ತಾಳೆ. ಸದರಿ ಅಕ್ಕಮ್ಮನ ಬಗ್ಗೆ ನಾವು ಈ ದಾವೆಯಲ್ಲಿ ಏನು ತಿಳಿಸಿರುವುದಿಲ್ಲ ಎಂದರೆ ಸರಿ. ಸದರಿ ಅಕ್ಕಮ್ಮ ಇವಳ ತನ್ನ ಗಂಡನಾದ ನಿಂಗಪ್ಪ ಮತ್ತು ಮಗ ಸಿದ್ದಪ್ಪನನ್ನು ತನ್ನ ಸರಳ ಮತ್ತು ಸಮೀಪ ವಾರಸುದಾರರನ್ನಾಗಿ ಬಿಟ್ಟು ಪೋತಿಯಾಗಿರುತ್ತಾಳೆ ಎಂದರೆ ಸರಿ. ಸದರಿ ಅಕ್ಕಮ್ಮನ ಮಗ ಸಿದ್ದಪ್ಪನನ್ನು 3 ನೇ ವಾದಿಯಾದ ತಿಪ್ಪಣ್ಣನ ಮಗಳನ್ನು ಮದುವೆಯಾಗಿರುತ್ತಾನೆ ಎಂದರೆ ಸರಿ.

3) 11 ರಿಂದ 13 ನೇ ವಾದಿಯರು 3 ನೇ ವಾದಿ ತಿಪ್ಪಣ್ಣ ಮತ್ತು ಆತನ ಹೆಂಡತಿ ಜಯಮ್ಮ ಇವರ ಮೊಮ್ಮಕಳು ಎಂದರೆ ಸರಿ. 3 ನೇ ವಾದಿ ತಿಪ್ಪಣ್ಣ ಮತ್ತು ಆತನ ಹೆಂಡತಿ ಜಯಮ್ಮ ಇವರು 11 ರಿಂದ 13 ನೇ ವಾದಿಯರ ನೈಸರ್ಗಿಕ ಸಂರಕ್ಷಣೆದಾರರು ಎಂದರೆ ಸರಿ. ನಾವು ಈ ದಾವೆಯನ್ನು ಮಾಡುವ ಪೂರ್ವದಲ್ಲಿ 2 ನೇ ಪ್ರತಿವಾದಿಯು ಇದೇ ನ್ಯಾಯಾಲಯದಲ್ಲಿ ಕೇವಿಯಟ್ ಅರ್ಜಿಯನ್ನು ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ಕೇವಿಯಟ್ ಅರ್ಜಿಯನ್ನು ಸಲ್ಲಿಸಿದ ಸಮಯದಲ್ಲಿ ಅದಕ್ಕೆ ಲಗತ್ತಿಸಿದ ಸ್ವೀಕೃತಿ ಪತ್ರ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ, ಸದರಿ ಸ್ವೀಕೃತಿ ಪತ್ರವನ್ನು ನಿಡಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಡಿ-1(ಎ) ಎಂದು ಗುರುತಿಸಲಾಯಿತು.

4) ನಿಮಗೆ 2 ನೇ ಪ್ರತಿವಾದಿಯು ಈ ನ್ಯಾಯಾಲಯದಿಂದ ನೀಡಿದ ಕೇವಿಯಟ್ ಅರ್ಜಿಯನ್ನು 4 ಮತ್ತು 8 ನೇ ವಾದಿಯರು ಖುದ್ದು ಸ್ವೀಕರಿಸಿದ್ದು, ಉಳಿದ ವಾದಿಯರು ಕೇವಿಯಟ್ ಅರ್ಜಿಯನ್ನು ಪಡೆದುಕೊಳ್ಳಲು ನಿರಾಕರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾವು ಯಾವುದೇ ಕೇವಿಯಟ್ ಅರ್ಜಿಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ಯಾವುದೇ ಅಂಚೆ ಸ್ವೀಕೃತಿ ಪತ್ರಕ್ಕೆ ಸಹಿಯನ್ನು ಮಾಡಿರುವುದಿಲ್ಲ ಮತ್ತು ಅದು ನನಗೆ ಸಂಬಂಧಿಸಿದ ಸಹಿ ಅಲ್ಲ ಎಂದು ಸಾಕ್ಷಿಯು ಸಾಕ್ಷ ನುಡಿಯುತ್ತಾರೆ. ವಾದ ಪತ್ರದಲ್ಲಿರುವ 7 ನೇ ಪುಟದ 8 ನೇ ಕ್ರಮಾಂಕದ ಸಹಿಯು ನನ್ನದಿರುತ್ತದೆ ಸದರಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ-2 ಎಂದು ಗುರುತಿಸಲಾಯಿತು. . ಸಾಕ್ಷಿಯು ವಕಾಲತ ನಾಮೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-1 (ಎ) ,

ನಿಡಿ–2 ಹಾಗೂ ನಿಡಿ–3 ಸಹಿಗಳು ಒಬ್ಬನೇ ವ್ಯಕ್ತಿಗೆ ಸೇರಿದ ಸಹಿಗಳು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಿಡಿ–2 ಮತ್ತು ನಿಡಿ–3 ನನಗೆ ಸೇರಿದ ಸಹಿಗಳು ಇದ್ದು, ನಿಡಿ–1(ಎ) ಸಹಿ ನನ್ನದು ಅಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

5) ಅಗಸನಹಳ್ಳಿ ಗ್ರಾಮದಲ್ಲಿ ಮಹದೇವಪ್ಪ ತಂದೆ ಗುಡ್ಡಪ್ಪ ಕನವಳ್ಳಿ ಎನ್ನುವ ನಾನೊಬ್ಬನೇ ವ್ಯಕ್ತಿ ಇದ್ದು, ಅಂತಹ ಹೆಸರಿನ ಬೇರೆ ಯಾವುದೇ ವ್ಯಕ್ತಿಯು ನಮ್ಮ ಊರಿನಲ್ಲಿ ಇರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಡಿ–1(ಎ), ನಿಡಿ–2 ಮತ್ತು ನಿಡಿ–3 ಸಹಿಗಳನ್ನು ನಾನೇ ಮಾಡಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿಯು ನಿಡಿ–2 ಮತ್ತು ನಿಡಿ–3 ಸಹಿಗಳು ಇದ್ದು, ನಿಡಿ–1(ಎ) ನನ್ನ ಸಹಿ ಅಲ್ಲ ಎಂದು ಉತ್ತರಿಸುತ್ತಾರೆ. ನಾನು ಯಾವಾಗಲೂ ನನ್ನ ಸಹಿಯನ್ನು ಎಂ. ಜಿ. ಕನವಳ್ಳಿ ಎಂದು ಮಾಡುತ್ತೇನೆ ಎಂದರೆ ಸರಿ.

6) ಮೊದಲು ನಾನು ನಿಡಿ–1(ಎ) ಸಹಿ ನನ್ನದೇ ಇರುತ್ತದೆ ಎಂದು ಒಪ್ಪಿಕೊಂಡು ನಂತರ ನನ್ನ ಕೇಸಿಗೆ ಅನುಕೂಲವಾಗಲೀ ಎನ್ನುವ ಉದ್ದೇಶದಿಂದ ಸದರಿ ನಿಡಿ–1(ಎ) ಸಹಿ ನನ್ನದೇ ಇದ್ದರೂ ಸಹಿತ ನನ್ನ ಸಹಿ ಅಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತೀದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಬ್ಯಾಡಗಿ ಶಹರದ ವ್ಯಾಪ್ತಿಯ ಹದ್ದಿನಲ್ಲಿ ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ಬ್ಯಾಡಗಿ ಶಹರದ ಅಗಸನಹಳ್ಳಿ ವಾರ್ಡ ಸಂಖ್ಯೆ 23/4 ರಲ್ಲಿ ಬರುತ್ತದೆ ಎಂದರೆ ಸರಿ.

7) ದಿಃ 06–07–2012 ರಂದು 2 ನೇ ಪ್ರತಿವಾದಿಯು ತಾನೇ ದಾವಾ ಆಸ್ತಿಯ ಸಂಪೂರ್ಣ ಮಾಲೀಕರಿದ್ದು, ವಾದಿಗಳಾದ ನಾವು ಮಾನ್ಯ ನ್ಯಾಯಾಲಯದಿಂದ ಸುಳ್ಳು ದಾಖಲೆಗಳ ಮೂಲಕ ನಾವೇ ಮಾಲೀಕರು ಇರುತ್ತೇವೆ ಮತ್ತು ನಮ್ಮ ವಿರುದ್ಧ ತಾಕೀದಿ ಹುಕುಂ ಅನ್ನು ನಮಗೆ ಗೊತ್ತಿಲ್ಲದ ರೀತಿಯಲ್ಲಿ ನಮಗೆ ನ್ಯಾಯಾಲಯದಿಂದ ಯಾವುದೇ ಪೂರ್ವ ನೋಟೀಸು ಇಲ್ಲದೇ ಆದೇಶ ಪಡೆಯಬಾರದು ಎನ್ನುವ ಉದ್ದೇಶದಿಂದ ನಮ್ಮ ವಿರುದ್ಧ 2012 ರಲ್ಲಿ ಕೇವಿಯಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಹಾಗೆ 2 ನೇ ಪ್ರತಿವಾದಿಯು ಕೇವಿಯಟ್ ಅರ್ಜಿ ಸಲ್ಲಿಸಿದ ನಂತರ ನೊಂದಾಯಿತ ಅಂಚೆ ಮೂಲಕ ನಾವು ಕೇವಿಯಟ್ ಅರ್ಜಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರ ಅರ್ಜಿಯು ನಮಗೆ ತಲುಪಿದ ನಂತರ ನಿಗಧಿತ ಅವಧಿಯಲ್ಲಿ ನಾವು ಯಾವುದೇ ದಾವೆಯನ್ನು ಪ್ರತಿವಾದಿಯರ ವಿರುದ್ಧ ಹೂಡಿರುವುದಿಲ್ಲ ಎಂದರೆ ಸರಿಯಲ್ಲ.

8) ದಾವಾ ಆಸ್ತಿಯು ಮೂಲತಃ ಮಾಸಣಗಿ ಗ್ರಾಮದ ಪಂಚಾಯತ ವ್ಯಾಪ್ತಿಯಲ್ಲಿ ಬರುತ್ತಿದ್ದು ನಂತರ ಶಿಡೇನೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿತ್ತು ಎಂದರೆ ಸರಿ. ನಂತರ ಅಗಸನಹಳ್ಳಿ ಗ್ರಾಮಕ್ಕೆ ಸೇರಿ ಬ್ಯಾಡಗಿ ಪುರಸಭಾ ವ್ಯಾಪ್ತಿಯ ಒಳಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ಗಾಂವ ಠಾಣಾ ಆಸ್ತಿ ಎಂದರೆ ಸರಿ. ಸದರಿ ಆಸ್ತಿಗೆ ಅಳತೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ಅಳತೆ ಮಾಡಿರುವುದಿಲ್ಲ ಮತ್ತು ಹದ್ದುಬಸ್ತು

ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಮ್ಮ ಹೆಸರಿನಲ್ಲಿ ಪುರಸಭೆಯಲ್ಲಿ ಇ-ಸ್ವತ್ತು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಆಸ್ತಿಗಳು ಖಾತೆ ಆಗಿರುವುದಿಲ್ಲ ಆದ್ದರಿಂದ ಇ-ಸ್ವತ್ತು ಮಾಡಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ.

9) ಮೂಲಪುರುಷ ಗುಡ್ಡಪ್ಪ ಅಂದರೆ 2 ರಿಂದ 13 ನೇ ವಾದಿಯರ ಮೂಲಪುರುಷ ಇವನು 1994 ನೇ ಇಸ್ವಿಯಲ್ಲಿ ಪೋತಿಯಾಗಿರುತ್ತಾನೆ ಎಂದರೆ ಸರಿ. 1994 ರಿಂದ 2016 ನೇ ಇಸ್ವಿಯವರೆಗೂ ನಮ್ಮ ಹೆಸರಿನಲ್ಲಿ ಖಾತೆ ಮಾಡಿಕೊಳ್ಳಲು ನಮಗೆ ಯಾವುದೇ ತೊಂದರೆ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಪೋತಿಯಾದ ನಂತರ ನಮ್ಮ ಪಿತ್ರಾರ್ಜಿತ ಜಮೀನುಗಳನ್ನು ಹಿಸ್ಸೆ ಮಾಡಿಕೊಂಡು ಆ ಪ್ರಕಾರ ಖಾತೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆಗೆ ತೊಂದರೆ ಆಗುತ್ತದೆ ಎನ್ನುವ ಉದ್ದೇಶದಿಂದ ನಾವು ಜಮೀನುಗಳನ್ನು ಹಿಸ್ಸೆ ಮಾಡಿಕೊಂಡು ಖಾತೆ ಮಾಡಿಕೊಂಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

10) ವಾದಿಯರು ಎಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ವಾಸವಾಗಿದ್ದು, ಅವರೆಲ್ಲರೂ ಪ್ರತ್ಯೇಕ ಪ್ರತ್ಯೇಕ ಚುನಾವಣಾ ಗುರುತಿನ ಚೀಟಿ, ಆಧಾರ ಕಾರ್ಡ, ಪಡಿತರ ಚೀಟಿ ಮತ್ತು ಇತರ ದಾಖಲೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಹೊಂದಿರುತ್ತಾರೆ ಎಂದರೆ ಸರಿ. ನಮ್ಮ ಸಹೋದರನಾದ 5 ನೇ ವಾದಿಯು ಹಾನಗಲ್ ಪೋಲೀಸ್ ಠಾಣೆಯಲ್ಲಿ ಸಹಾಯಕ ಸಬ್ ಇನ್ಸಫೆಕ್ಟರ ಆಗಿ ಕೆಲಸ ನಿರ್ವಹಿಸುತ್ತಿದ್ದಾನೆ ಎಂದರೆ ಸರಿ. 7 ನೇ ವಾದಿಯು ಶಿಗ್ಗಾಂವ ಪೋಲೀಸ್ ಠಾಣೆಯಲ್ಲಿ ಪೋಲಿಸ್ ಪೇದೆ ಆಗಿ ಕೆಲಸ ನಿರ್ವಹಿಸುತ್ತಿದ್ದಾನೆ ಎಂದರೆ ಸರಿ. 6 ನೇ ವಾದಿಯು ದಲಾಲಿ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸಾಕ್ಷಿಯು ಆತನು ಕೂಲಿ ಕೆಲಸ ಮಾಡುತ್ತಾನೆ ಎಂದು ಉತ್ತರಿಸುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.